ಇ)

ವರ್ಷ	ಕಳುವಾದ ವಸ್ತುಗಳ ಮೌಲ್ಯ ರೂ.	ವಶಪಡಿಸಿಕೊಂಡ ವಸ್ತುಗಳ ಮೌಲ್ಯ ರೂ.
೧೯೮೫	೧೯,೦೯,೦೯೧–೨೦	೮,೭೬,೭೫೮–೨೦
೧೯೮೬	೨೮,೧೧,೨೫೯–೮೦	೧೩,೦೪,೯೭೧–೦೦
೧೯೮೭	೧೭,೨೬,೧೫೬–೦೦	೩,೪೮,೬೮೯–೦೦

ದಿನಾಂಕ ೧–೧–೮೫ರಿಂದ ೧೯೮೮ರ ಮೇ ೧೫ರವರೆಗೆ ಒಟ್ಟು ೧೫೦೭ ಜನ ಅಪರಾಧಿಗಳನ್ನು ಬಂಧಿಸಲಾಗಿದೆ. ಒಟ್ಟು ೧೫೪ ದರೋಡೆ ಪ್ರಕರಣಗಳು ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿವೆ.

ಒಟ್ಟು ೧೧ ದರೋಡೆ ಪ್ರಕರಣಗಳಲ್ಲಿ ಅಪರಾಧಿಗಳಿಗೆ ನ್ಯಾಯಾಲಯವು ಶಿಕ್ಷೆ ವಿಧಿಸಿದೆ.

ಮುಂಬೈ ಬಸ್ ಸಾರಿಗೆ ಬಗ್ಗೆ

೧೫೩೧. ಶ್ರೀ ಬಾಬುರೆಡ್ಡಿ ವಿ. ತುಂಗಳ್ (ಬೀಳಗಿ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಜವಂಖಿಂಡಿ—ಮುಂಬೈ ನಗರಗಳ ಮಧ್ಯೆ ರಾತ್ರಿ ಸಂಚಾರದ ಬಸ್ ಓಡಿಸುವಂತೆ ಜವಂಖಿಂಡಿಯ ನಾಗರೀಕರಿಂದ ಮನವಿ ಬಂದಿರುವುದು ನಿಜವೇ ;

ಆ) ಸರ್ಕಾರವು ಈ ಕೋರಿಕೆಯನ್ನು ಮನ್ನಿಸಿ ಬಸ್ಸ್ ಓಡಿಸುವ ವ್ಯವಸ್ಥೆ ಮಾಡುವುದೇ ?

ಇ) ಹಾಗಿಲ್ಲದಿದ ಲ್ಲಿ ಸರ್ಕಾರಕ್ಕೆ ಇರುವ ತೊಂದರೆಗಳೇನು ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಮಂತ್ರಿಯವರು).—

ಅ) ಹೌದು.

ಆ) ಮತ್ತು ಇ) ಈ ಮಾರ್ಗವು ಈಗಿನ ಉಭಯ ರಾಜ್ಯಗಳ ಒಪ್ಪಂದದಲ್ಲಿ ಸೇರಿರುವುದಿಲ್ಲ. ಆದ್ದರಿಂದ ಈ ಮಾರ್ಗದ ಮೇಲೆ ಬಸ್ಸನ್ನು ಓಡಿಸಲು ಸಾಧ್ಯವಾಗಿರುವುದಿಲ್ಲ. ಈ ಮಾರ್ಗವನ್ನು ಮಹಾರಾಷ್ಟ್ರ ಸರ್ಕಾರದೊಡನೆ ಚರ್ಚಿಸಿ ಮುಂದಿನ ಉಭಯ ರಾಜ್ಯಗಳ ಒಪ್ಪಂದದ ಪಟ್ಟಿಯಲ್ಲಿ ಸೇರಿಸಲು ಉದ್ದೇಶಿಸಲಾಗಿದೆ.

ಸಚಿವರುಗಳ ವಿದೇಶ ಪ್ರವಾಸದ ಬಗ್ಗೆ

೧೫೩೪. ಶ್ರೀ ಬಾಬುರೆಡ್ಡಿ ವಿ. ತುಂಗಳ್ (ಬೀಳಗಿ).—ಮಾನ್ಯ ಮುಂಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೭–೮೮ರಲ್ಲಿ ರಾಜ್ಯ ಸಚಿವ ಸಂಪುಟದ ಎಷ್ಟು ಜನ ಸಚಿವರು ವಿದೇಶ ಪ್ರವಾಸಕ್ಕೆ ಹೋಗಿದ್ದರು (ಸಚಿವರ ಹೆಸರುಗಳನ್ನು ಒದಗಿಸುವುದು)

ಆ) ಇವರ ವಿದೇಶ ಪ್ರವಾಸಕ್ಕಾಗಿ ರಾಜ್ಯ ಸರ್ಕಾರ ಖರ್ಚು ಮಾಡಿದ ಹಣವೆಷ್ಟು ?

ಇ) ಇವರ ವಿದೇಶ ಪ್ರವಾಸದ ಉದ್ದೇಶವೇನಿತ್ತು ?